ಮುಖ್ಯಮಂತ್ರಿಯವರು ಸಹ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ಒಂದು ಹೇಳಿಕೆಯನ್ನು ಇವತ್ತಿನದಿವಸ ಕೊಡಿಸಬೇಕು. ಎರಡನೆಯದಾಗಿ, ಚಿತ್ರದುರ್ಗ ಜಿಲ್ಲೆಯಲ್ಲಿ, ಹರಿಜನ ಹೆಣ್ಣುಮಗಳಿಗೆ ಬೆತ್ತಲೆ ಮಾಡಿರುತಕ್ಕಂಥ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೇವೆ ಎಂಬುದರ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತೇನೆಂದು ಸನ್ಮಾನ್ಯ ಗೃಹ ಸಚಿವರು ಈಗಾಗಲೇ ಹೇಳಿದ್ದಾರೆ. ಆದ್ದರಿಂದ ಮಾನ್ಯ ಗೃಹ ಸಚಿವರಿಂದ ಈ ಒಂದು ಹೇಳಿಕೆಯನ್ನು ಕೊಡಿಸಬೇಕು. ಆದರೆ ಮಾನ್ಯ ಗೃಹ ಸಚಿವರು ಮೇಲ್ಮನೆಯಲ್ಲಿ ಮಾತನಾಡುತ್ತಾ ಈ ಒಂದು ಕೇಸಿಗೆ ಸಂಬಂಧಪಟ್ಟಂತೆ ಎಸ್.ಪಿ.ಯವರಿಗೆ ಜವಾಬ್ದಾರಿ ಮಾಡಿದ್ದೇನೆಂದು ಹೇಳಿದ್ದಾರೆ. ಆದ್ದರಿಂದ ಇದರ ಬಗ್ಗೆ ಸ್ಪಷ್ಟವಾದ ನಿಲುವನ್ನು ಮಾನ್ಯ ಸಚಿವರು ವ್ಯಕ್ತಪಡಿಸಬೇಕು. ನಾನು ಈಗಾಗಲೇ ಕೇಳಿರುತಕ್ಕಂಥ ಮೂರು ವಿಷಯಗಳಿಗೆ ಸಂಬಂಧಪಟ್ಟಂತೆ ಇಂದು ಸಾಯಂಕಾಲದೊಳಗೆ ಸರ್ಕಾರದ ಕಡೆಯಿಂದ ಒಂದು ಹೇಳಿಕೆಯನ್ನು ಕೊಡಿಸಬೇಕು. ನಾವು ಇವತ್ತಿನ ದಿವಸ ಎಲ್ಲಾ ಮಸೂದೆಗಳನ್ನು ಪಾಸ್ ಮಾಡಿಕೊಡುವುದಕ್ಕೆ ತಯಾರಿದ್ದೇವೆ. ಆದರೆ, ಈ ವಿಚಾರದಲ್ಲಿ ಅವರ ಅಭಿಪ್ರಾಯ ಅವರಿಗೆ, ನಮ್ಮ ಅಭಿಪ್ರಾಯ ನಮಗೆ. ಅದೇನೆ ಇರಲಿ ನಾನು ಈಗಾಗಲೇ ಪ್ರಸ್ತಾಪ ಮಾಡಿರುತಕ್ಕಂಥ ಎಲ್ಲಾ ವಿಷಯಗಳಿಗೆ ಇವತ್ತು ಸದನ ಮುಗಿಯುವುದರೊಳಗೆ ದಯಮಾಡಿ ಹೇಳಿಕೆಯನ್ನು ಸರ್ಕಾರದವರಿಂದ ಕೊಡಿಸಬೇಕೆಂದು ನಾನು ತಮ್ಮಲ್ಲಿ ಒತ್ತಾಯ ಮಾಡಿಕೊಳ್ಳುತ್ತೇನೆ.

(iii) ಗುರುಸ್ವಾಮಿಯವರ ಕ್ಷೇತ್ರದಲ್ಲಿ ನಡೆದಂತ ಕಾರ್ಯಕ್ರಮದಲ್ಲಿ ಮಾನ್ಯ ಸದಸ್ಯರನ್ನು ಕಡೆಗಣಿಸಿರುವ ವಿಚಾರ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಮತ್ತೊಂದು ವಿಶೇಷವಾದಂಥ ವಿಚಾರವನ್ನು ಪ್ರಸ್ತಾಪಮಾಡುವುದಕ್ಕೆ ಇಚ್ಛಿಸುತ್ತೇನೆ. ಅದೇನೆಂದರೆ, ಮೊನ್ನೆ ದಿವಸ ಮಾನ್ಯ ಗುರುಸ್ವಾಮಿಯವರ ಕ್ಷೇತ್ರದಲ್ಲಿ ನಡೆದಂಥ ಕಾರ್ಯಕ್ರಮದಲ್ಲಿ ಮಾನ್ಯ ಸದಸ್ಯರನ್ನು ಕಡೆಗಣಿಸಿದಂಥ ವಿಚಾರವನ್ನು ಇಲ್ಲಿ, ಈಗಾಗಲೇ ಪ್ರಸ್ತಾಪ ಮಾಡಲಾಗಿದೆ.

ಅಧ್ಯಕ್ಷರು :— ಮಾನ್ಯ ಸದಸ್ಯರನ್ನು ಕರೆಸಿ ಮಾತನಾಡುತ್ತೇನೆಂದು ಈಗಾಗಲೇ ಹೇಳಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೆ, ಇವತ್ತು ಸಹ ಅವರ ಕ್ಷೇತ್ರದಲ್ಲಿ, ಮಾಜಿ ರಾಷ್ಟ್ರಪತಿಗಳು ಭೇಟಿ ನೀಡತಕ್ಕಂಥ ಒಂದು ಕಾರ್ಯಕ್ರಮ ಇದೆ. ಇವನ್ನು ಕೂಡ ಹಿಂದೆ ಆಗಿದ್ದಂಥ ಪರಿಸ್ಥಿತಿಯೆ ಆಗಿದೆ. ಈ ಒಂದು ಸರ್ಕಾರಿ ಕಾರ್ಯಕ್ರಮದಲ್ಲಿ, ಮಾನ್ಯ ಸದಸ್ಯರ ಹೆಸರನ್ನು ಕೆಳಗಿನ ಸಾಲಿನಲ್ಲಿ ಮುಖ್ಯ ಅತಿಥಿ ಎಂದು ಪ್ರಕಟ ಮಾಡಿದ್ದಾರೆ. ಇವತ್ತಿನ ದಿವಸ ಒಬ್ಬ ಶಾಸಕನಿಗೆ ಸಿಗಬೇಕಾದ ಗೌರವ ಖಂಡಿತವಾಗಿ

ಅವರಿಗೆ ಸಿಗುತ್ತಿಲ್ಲ. ತಾವು ಈಗಾಗಲೇ ಅವರನ್ನು ಕರೆದು ಮಾತನಾಡುತ್ತೇವೆಂದು ಹೇಳಿದ್ದೀರಿ. ಮಾನ್ಯ ಸಭಾನಾಯಕರು ಈ ವಿಷಯದ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕು. ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಅವರ ಕ್ಷೇತ್ರದಲ್ಲಿ ಶಾಸಕರಾಗಿ ಯಾವುದೇ ರೀತಿಯ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಪೂರ್ಣವಾದ ಮಾಹಿತಿಯನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಇಂಥ ಕೆಲಸ ಮುಂದೆ ಆಗಬಾರದು ಎಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷ್ಣಮೂರ್ತಿ ಹಾಗೂ ಮಾನ್ಯ ಗುರುಸ್ವಾಮಿಯವರನ್ನು ನಿಮ್ಮ ಕಛೇರಿಗೆ ಕರೆಸಿ ಈ ವಿಚಾರದ ಬಗ್ಗೆ ನಾನು ಗಮನಹರಿಸುತ್ತೇನೆಂದು ತಾವು ಹೇಳಿದ್ದೀರಿ. ಮಾನ್ಯ ಸದಸ್ಯರುಗಳು ನಿಮ್ಮನ್ನು ಭೇಟಿ ಮಾಡಿದ್ದಾರೆ. ಆದರೆ ಮತ್ತೆ ಇದೇ ರೀತಿಯಾಗಿ ಪುನರಾವರ್ತನೆಯಾಗಿದೆ ಎಂದರೆ ಏನು ಮಾಡುವುದು? ಮಾನ್ಯ ಸದಸ್ಯರು ತಮ್ಮ ಕ್ಷೇತ್ರಕ್ಕೆ ಹೋಗಿ ಕಾರ್ಯಕ್ರಮಗಳನ್ನು ಮಾಡಬೇಕಾಗುತ್ತದೆ. ಆದ್ದರಿಂದ, ಈ ದೃಷ್ಟಿಯಲ್ಲಿ ಸರ್ಕಾರದ ನಿಲುವು ಏನು ಎಂಬುದು ಇಲ್ಲಿ ಸ್ಪಷ್ಟಗೊಡಿಸಬೇಕು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ಗಮನಿಸಿ ಅವರ ಜೊತೆಯಲ್ಲಿ ಈ ಬಗ್ಗೆ ಮಾತನಾಡುತ್ತೇನೆ.

2. ಮುಖ್ಯಮಂತ್ರಿಗಳ ಹೇಳಿಕೆ

ವಿಶ್ವಬ್ಯಾಂಕ್ ಅಧ್ಯಕ್ಷ ಶ್ರೀ ಜೇಮ್ಸ್ ಡಿ. ವುಲ್ಫೆನ್‌ಸನ್ ಅವರ ಕರ್ನಾಟಕ ಭೇಟಿಯ ಕುರಿತು ಹೇಳಿಕೆ.

ವಿಶ್ವ ಬ್ಯಾಂಕ್ ಅಧ್ಯಕ್ಷ ಶ್ರೀ ಜೇಮ್ಸ್ ಡಿ. ವುಲ್ಫೆನ್‌ಸನ್ ಅವರು ನವೆಂಬರ್ 7ರಿಂದ 9ರ ವರೆಗೆ ಕರ್ನಾಟಕಕ್ಕೆ ಭೇಟಿ ನೀಡಿದ್ದರು. ಅವರೊಂದಿಗೆ ಅವರ ಪತ್ನಿ ಶ್ರೀಮತಿ ಎಲೈನ್ ಆರ್. ವುಲ್ಫೆನ್‌ಸನ್, ವಿಶ್ವ ಬ್ಯಾಂಕಿನ ನವದೆಹಲಿ ಕಚೇರಿಯ ನಿರ್ದೇಶಕ (ಭಾರತ) ಶ್ರೀ ಎಡ್ವಿನ್ ಲಿಮ್, ಬ್ಯಾಂಕಿನ ವಾಷಿಂಗ್‌ಟನ್ ಕಚೇರಿಯ ಸಮನ್ವಯಾಧಿಕಾರಿ (ಭಾರತ) ಶ್ರೀಮತಿ ಜೋಯೆಲ್ ಬೆಸಾರ್ಡ್, ಅಂತರರಾಷ್ಟ್ರೀಯ ಆರ್ಥಿಕ ನಿಗಮದ ದಕ್ಷಿಣ ವಿಷ್ಯದ ನಿರ್ದೇಶಕ ಶ್ರೀ ಬರ್ನಾಡ್ ಸ್ಯಾಸ್ಟರ್, ಬ್ಯಾಂಕಿನ ಕಾರ್ಯ ನಿರ್ವಾಹಕ ನಿರ್ದೇಶಕ(ಭಾರತ) ಶ್ರೀ ಬಿ.ಪಿ. ಸಿಂಗ್ ಇವರುಗಳು ಆಗಮಿಸಿದ್ದರು.

ದಿನಾಂಕ 8ನೇ ನವೆಂಬರ್ 2000ದಂದು ಸಂಜೆ ಶ್ರೀ ವುಲ್ಫೆನ್‌ಸನ್ ಅವರು ನನ್ನನ್ನು ನನ್ನ ಸಂಪುಟದ ಮಂತ್ರಿಗಳು ಮತ್ತು ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳನ್ನು